ಅಭಿಯಾಚನೆ ಕ್ರಮಾಂಕ ೩೦—ಜನಾರೋಗ್ಯ

೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜನಾರೋಗ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೭, ೩೮, ೩೫,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೨—ನಗರಾಭಿವೃದ್ಧಿ ಮುಂತಾದವು:

೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೭೦,೧೪,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೨,೩೪, ೨೨,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೩ ನಿಗಮ ಮತ್ತು ನಗರ ಪಾಲಿಕೆಗಳು ಮಂತ್ತು ಪಟ್ಟಣ ಪಂಚಾಯಿತಿಗಳ ಅನುದಾನ

೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಿಗಮ ಮತ್ತು ನಗರ ಪಾಲಿಕೆಗಳು ಮತ್ತು ಪಟ್ಟಣ ಪಂಚಾಯತಿಗಳ ಅನುದಾನ ಪರಿಹಾರ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೨,೯೪,೦೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೬—ರಾಜ್ಯ ವಿಧಾನ ಮಂಡಲ

೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯ ವಿಧಾನ ಸಭೆಗೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೮೩,೩೯,೦೦೦ ರೂ ಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೭—ನ್ಯಾಯ ಪರಿಪಾಲನೆ

೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನ್ಯಾಯ ಪರಿಪಾಲನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೮,೧೭,೫೦,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಚುಂಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಪ್ರಶ್ನೆ ೫೯೫ (೧೬೫)

ಅಧ್ಯಕ್ಷರು.—ಶ್ರೀ ನಂಜಯ್ಯ ಮಂತರವರ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ

ಶ್ರೀ ಹೆಚ್.ಜಿ. ಗೋವಿಂದೇಗೌಡ.—ಮಾನ್ಯ ಅಧ್ಯಕ್ಷರೇ, ಉತ್ತರ ಈ ರೀತಿ ಇದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಯನ್ನು ಮುಂದಕ್ಕೆ ಹಾಕಿದೆಯೆಂದು ಹೇಳಿದ್ದೀರಿ, ಯಾವ ಕಾರಣದಿಂದ ಮುಂದಕ್ಕೆ ಹೋಗಿದೆ, ಆ ಕಾರಣ ಗೊತ್ತಾಗ ಬೇಕಲ್ಲವೇ ? ಅವರು ಸಮಯ ಕೇಳಿದ್ದಾರೆಂದು ತಾವು ಹೇಳಬೇಕಲ್ಲವೇ

ಅಧ್ಯಕ್ಷರು.—ಕ್ಯಾರೀಡ್ ಓವರ್ ಎಂದು ಬರೆದಿದ್ದಾರೆ.

ಶ್ರೀ ಎಸ್ ಬಂಗಾರಪ್ಪ —ಸಕಾರಣಗಳಿದ್ದರೆ. ಏನು ಕಾರಣವೆಂದು ಮಾನ್ಯ ಸದಸ್ಯರಿಗೆ ಗೊತ್ತಿದ್ದರೆ ಒಳ್ಳೆಯದು. ಇನ್ನು ಮುಂದೆ ಕಾರಣಗಳನ್ನು ಕೊಡಬೇಕೆಂದು ಹೇಳುತ್ತೇನೆ ಸಕಾರಣಗಳೇನಾದರೂ ಇದ್ದರೆ. ಅದು ಏನೆಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸಬೇಕಾಗುತ್ತದೆ.

ಅಧ್ಯಕ್ಷರು.—ಅದು ಕ್ಯಾರೀಡ್ ಓವರ್ ಆಗಿದೆ. ಮುಂದೆ ಬರುತ್ತದೆ,

ಶ್ರೀ ಎಸ್. ಬಂಗಾರಪ್ಪ.—ತಾವು ಸುಮ್ಮನೇ ಮುಂದಕ್ಕೆ ಹಾಕಲಾಗಿದೆ ಎಂದು ಹೇಳಿದರೆ ನಂಗೆ ಕಷ್ಟವಾಗುತ್ತದೆ, ಇದನ್ನು ಮುಂದಕ್ಕೆ ಹಾಕಲು ಏನಾದರೂ ಸಕಾರಣಗಳಿವೆ ಎಂಬುದನ್ನು ತಿಳಿಸಬೇ

ಕಾಗತ್ತದೆ, The Hon'ble Member is entitled to know the reasons for postponing his Question I don't think this is correct.

ಶ್ರೀ ಹೆಚ್.ಜಿ. ಗೋವಿಂದೇಗೌಡ.—ನಿನ್ನೆ–ಮೊನ್ನೆ ಸಿಪಿಐ ಕಚೇರಿಯಲ್ಲಿ ಮುಷ್ಕರ ಇದ್ದ ಕಾರಣ, ಉತ್ತರವನ್ನು ತರಿಸಲು ಸಾಧ್ಯವಾಗಲಿಲ್ಲ. ಇದರ ಬಗ್ಗೆ ನಾನು ಮಾನ್ಯ ಸಭಾಧ್ಯಕ್ಷರಿಗೆ ಬರೆದು ತಿಳಿಸಿದ್ದೇನೆ. ಈ ಪ್ರಶ್ನೆಯನ್ನು ವಿಥೆಲ್ಡ್ ಮಾಡಬೇಕು. ಎಂದು ಇನ್ನು ೨ ದಿವಸಗಳಲ್ಲಿ ಉತ್ತರ ತರಿಸುತ್ತೇನೆ.

ರಾಜ್ಯದಲ್ಲಿರುವ ಉರ್ದು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳು.

೧೬೭೦ ಶ್ರೀ ಆರ್. ರೋಷನ್‌ಬೇಗ್ (ಶಿವಾಜಿನಗರ)—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಉರ್ದು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳ ಸಂಖ್ಯೆ ಎಷ್ಟು

ಆ) ಉರ್ದು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿರುವ ಕನ್ನಡ ಶಿಕ್ಷಕರ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು

ಇ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿರುತ್ತಾರೆ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ೨೮೫೯

ಆ) ೧೦೪

ಇ) ಗುತ್ತಿಗೆ ಆಧಾರದ ಮೇಲೆ ಅಭ್ಯರ್ಥಿಗಳನ್ನು ನೇಮಕ ಮಾಡುವುದರ ಮೂಲಕ ಈ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ನೇರ ನೇಮಕಾತಿ ಮೂಲಕ ಖಾಯಂ ನೇಮಕಾತಿ ನಡೆಸುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ.

SRI R. ROSHAN BAIG.—In the reply, the Hon'ble Minister has stated that there are 104 Kannada teachers vacancies in Urdu Primary and Middle Schools and these posts have been filled by appointing candidates on contract basis The Hon'ble Minister also further stated in his reply that appointment of permanent candidate through direct recruitment is under examination of Government. ಈ ಲೆಕ್ಕ ಸಂಖ್ಯೆಗಳನ್ನು ಕೊಟ್ಟಿರುವುದು ಸರಿಯಾಗಿದೆಯೇ ಎಂಬ ಬಗ್ಗೆ ನನಗೆ ಸಂಶಯ ಬಂದಿದೆ. ನೀವು ಅಂಡರ್ ಎಗ್ಸಾಮಿನೇಶನ್ ಎಂದು ಹೇಳಿದರೆ ಅರ್ಥವಾಗುವುದಿಲ್ಲ. ಯಾವಾಗ ಮಾಡುತ್ತೀರೆಂಬುದನ್ನು ತಿಳಿಸಬೇಕು. ಈಗ ಏನಾಗಿದೆ ಎಂದರೆ, ಎಷ್ಟೋ ಅಭ್ಯರ್ಥಿಗಳಿಗೆ ಕನ್ನಡ ಬರುವುದಿಲ್ಲವೆಂದು ನ್ಯಾಕ್ಷಿಯಲ್ಲಿ ಅನಾನುಕೂಲವಾಗಿದೆ. ಇದರಿಂದ ಅಲ್ಪಸಂಖ್ಯಾತರು ತೊಂದರೆಗೀಡಾಗಿದ್ದಾರೆ. I therefore request the Government to immediately fill up there vacancies.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಹಂಗಾಮಿಯಾಗಿ ೧೦೪ ಉಪಾಧ್ಯಾಯರುಗಳನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲಾಗುತ್ತದೆ. ಅವರನ್ನು ರಿಲೀವ್ ಮಾಡಿದ ಮೇಲೆ, ಡಿಎಆರ್‌ಸಿ ಮುಂದೆ ಅವರು ಹೋಗಿ ಖಾಯಮ್ಮಾಗಲು ಅರ್ಹತೆ ಪಡೆಯಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ವೇದಾಂತ ಹೆಬ್ಬಾಮ್ಮಿಗೆಯವರ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.